# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/08/2008 ರ ನಡವಳಿಗಳು

ವಿಷಯದ ಸಂಖ್ಯೆ:421/2008–09

Improvements to National College Playground (South Zone Package II), Bangalore approval to work slip and E.I.R.L ಬಗ್ಗೆ.

ಪ್ರಸ್ತಾವನೆ:

Improvements to National College Playground (South Zone Package II), Bangalore ಕಾಮಗಾರಿಯ ಅಂದಾಜು ಮೊತ್ತ ರೂ.250.00 ಲಕ್ಷಕ್ಕೆ ದರಪಟ್ಟಿ 2004–05 ರಂತೆ ತಯಾರಿಸಿದ್ದು ಟೆಂಡರ್ ಮುಖಾಂತರ ಗುತ್ತಿಗೆದಾರರಾದ ಶ್ರೀ.ಎಂ.ಜಗನ್ನಾಥ್ ರವರಿಗೆ ಶೇ.44.21% ರಷ್ಟು ಹೆಚ್ಚುವರಿ ದರಗಳಿಗೆ ದಿನಾಂಕ:12/10/2007 ರಂದು ಕಾರ್ಯಾದೇಶ ನೀಡಲಾಗಿದೆ. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರ ನಿರ್ದೇಶನದಂತೆ ಮೈದಾನದ ಒಳಗಿನ ಜೆಲ್ಲಿ ಚರಂಡಿಯನ್ನು ಸುಮಾರು 3.5 ಮೀ ಆಳದವರೆಗೆ ನಿರ್ಮಿಸುವ ಅವಶ್ಯಕತೆ ಕಂಡು ಬಂದಿರುತ್ತದೆ ಹಾಗೂ ಮೈದಾನದಲ್ಲಿ ಹೆಚ್ಚುವರಿಯಾಗಿ ಸಾರ್ವಜನಿಕ ಸಮಾರಂಭಗಳು ನಡೆಯಲಿದ್ದು, ಜನಸಂದಣಿಯ ಒತ್ತಡದಿಂದ ಚರಂಡಿಯ ಮೇಲ್ಭಾಗ ಮೇಲಿರುವ ಮಣ್ಣು ಕುಸಿಯಬಹುದಾಗಿರುತ್ತದೆ. ಮೂಲ ಅಂದಾಜು ಪಟ್ಟಿಯಲ್ಲಿ ಒದಗಿಸಿರುವ Filter Media ಅಂಶವು ಹೆಚ್ಚಾಗಿ ಈಜುಕೊಳದಲ್ಲಿ ಉಪಯೋಗಿಸುತ್ತಿದ್ದು, ಈ ಅಂಶವು ಹಾಲಿ ಮೈದಾನದ ಅಭಿವೃದ್ಧಿ ಯೋಜನೆಯಲ್ಲಿ ಅವಶ್ಯಕತೆ ಕಂಡು ಬರುವುದಿಲ್ಲ.

ಮೇಲಿನ ವಿವರಗಳ ಹಿನ್ನೆಯಲ್ಲಿ ಮೈದಾನದ ಮೇಲ್ಭಾಗ ಮೇಲಿಂದ ಬರುವ ಮಳೆ ನೀರನ್ನು ಹೊರ ಸಾಗಿಸಲು ಆರ್ ಸಿಸಿ ಲೀಡ್ ಡ್ರೈನ್ ಮಾಡುವ ಅವಶ್ಯಕತೆ ಇರುತ್ತದೆ. ಗ್ಯಾಲರಿ ಮೆಟ್ಟಿಲುಗಳ ಕೆಳಭಾಗದಲ್ಲಿನ ಪ್ರದೇಶವು ಅನವಶ್ಯಕ ಚಟುವಟಿಕೆಗಳಿಂದ ದೂರವಿಡಲು ಗ್ಯಾಲರಿ ಮೇಲೆ ನಿರ್ಮಿಸಬೇಕಾಗಿದ್ದ ಕೊಠಡಿಗಳನ್ನು, ಗ್ಯಾಲರಿ ಕೆಳಗಿನ ಪ್ರದೇಶದಲ್ಲಿ ನಿರ್ಮಿಸುವುದು ಅವಶ್ಯಕವಾಗಿದ್ದು, ಇದು ಮೈದಾನದಲ್ಲಿ ತಳ ಅಂತಸ್ತಿನಲ್ಲಿರುತ್ತದೆ. ಆದರೆ ಈ ಅಂಶಗಳನ್ನು ನಿರ್ವಹಿಸಲು ಮೂಲ ಗುತ್ತಿಗೆ ಕರಾರಿನಲ್ಲಿ ಇಲ್ಲದ ಕಾರಣ ಇವು ಹೆಚ್ಚುವರಿಯಾಗಿರುತ್ತದೆ. (EIRL)

ಆಟದ ಮೈದಾನದ ಮೇಲ್ಮೈ ಅನ್ನು ನಿರ್ಮಿಸುವ ಅಂಶಗಳಲ್ಲಿ ಮೂಲ ಅಂದಾಜು ಪಟ್ಟಿಯಲ್ಲಿ ಅಳವಡಿಕೆಯಾಗಿರುವ ಕೆಲವು ಅಂಶಗಳ ಪರಿಮಾಣಗಳಲ್ಲಿ ಹೆಚ್ಚುವರಿಯಾಗಿದ್ದು, ಈ ಹೆಚ್ಚುವರಿ ಪರಿಮಾಣಗಳಿಗೆ ಬೇಕಾಗಿರುವ ವೆಚ್ಚವನ್ನು ಲೆಕ್ಕ ಮಾಡಿ ವರ್ಕ್ ಸ್ಲಿಪ್ ಅನ್ನು ಕಾರ್ಯಪಾಲಕ ಅಭಿಯಂತರರು ಸಲ್ಲಿಸಿರುತ್ತಾರೆ. (Workslip)

ಈ ಮೇಲೆ ತಿಳಸಿದ ವಿವರಣೆಯಂತೆ ಮೂಲ ಅಂದಾಜು ಪಟ್ಟಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಅವಶ್ಯವಿರುವ ಇ.ಐ.ಆರ್.ಎಲ್ ಮತ್ತು ವರ್ಕ್‌ಸ್ಲಿಪ್ ಅಂಶಗಳನ್ನು ಅಳವಡಿಸಿಕೊಂಡು ಮಾರ್ಪಡಿತ ಅಂದಾಜು ಪಟ್ಟಿ ಸಲ್ಲಿಸಿದ್ದು, ಅದರ ಮೊತ್ತ ರೂ.3,59,78,432.00 ಗಳಿಗೆ (ಟಿ.ಪಿ.ಸೇರಿ) ಅನುಮೋದನೆಗಾಗಿ ಮುಖ್ಯ ಅಭಿಯಂತರರು (ಯೋಜನೆ) ರವರು ಸಲ್ಲಿಸಿದ್ದು, ದಿನಾಂಕ:06/06/2008 ರಂದು ನಡೆದ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಈ ಕಾಮಗಾರಿಗೆ ಸಂಬಂಧಿಸಿದ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್‌ಗಳನ್ನು ಅನುಮೋದಿಸುವ ಪ್ರಸ್ತಾವನೆಯನ್ನು ಚರ್ಚಿಸಲಾಗಿ ಸದರಿ ಪ್ರಸ್ತಾವನೆಯ ಅನುಮೋದನೆಯನ್ನು ಲೋಕೋಪಯೋಗಿ ಇಲಾಖೆಯ ಕೋಡಲ್ ನಿಯಮಗಳಂತೆ ನಿರ್ವಹಿಸಲು ಸೂಚಿಸಿರುತ್ತದೆ. ಈ ಪ್ರಸ್ತಾವನೆಗೆ ತಾಂತ್ರಿಕ ಸಲಹಾ ಸಮಿತಿಯವರು ನೀಡಿರುವ ಸೂಚನೆಯಂತೆ ಪಿಡಬ್ಲ್ಯೂಡಿ ಕೋಡಲ್ ನಿಯಮಗಳಂತೆ ಪಿಡಬ್ಲ್ಯೂಜಿ–65 ರಂತೆ ಕ್ಲಾಸ್ 13 (ಎ) ಯಿಂದ (ಸಿ) ತನಕ ಗುತ್ತಿಗೆದಾರರ ಕರಾರಿನಲ್ಲಿ ಸೇರಿಸಿರುವಂತೆ ಕ್ರಮ ತೆಗೆದುಕೊಂಡು ಕಾರ್ಯಪಾಲಕ ಅಭಿಯಂತರರವರು ವರ್ಕ್ ಸ್ಲಿಪ್ ಮತ್ತು ಇ.ಐ.ಆರ್.ಎಲ್ ಐಟಂಗಳ ಮೊತ್ತವನ್ನು ಲೆಕ್ಕ ಮಾಡಿ ಅನುಮೋದನೆಗೆ ಪ್ರಧಾನ ಅಭಿಯಂತರರವರ ಮುಖೇನ ಮಂಡಿಸಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

. . . . 2

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/08/2008 ರ ನಡವಳಿಗಳು

**ವಿಷಯದ ಸಂಖ್ಯೆ:421/2008-09**

Improvements to National College Playground (South Zone Package II), Bangalore approval to work slip and E.I.R.L ಬಗ್ಗೆ.

**ಪ್ರಸ್ತಾವನೆ:**

Improvements to National College Playground (South Zone Package II), Bangalore ಕಾಮಗಾರಿಯ ಅಂದಾಜು ಮೊತ್ತ ರೂ.250.00 ಲಕ್ಷಕ್ಕೆ ದರಪಟ್ಟಿ 2004-05 ರಂತೆ ತಯಾರಿಸಿದ್ದು ಟೆಂಡರ್ ಮುಖಾಂತರ ಗುತ್ತಿಗೆದಾರರಾದ ಶ್ರೀ.ಎಂ.ಜಗನ್ನಾಥ್ ರವರಿಗೆ ಶೇ.44.21% ರಷ್ಟು ಹೆಚ್ಚುವರಿ ದರಗಳಿಗೆ ದಿನಾಂಕ:12/10/2007 ರಂದು ಕಾರ್ಯಾದೇಶ ನೀಡಲಾಗಿದೆ. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರ ನಿರ್ದೇಶನದಂತೆ ಮೈದಾನದ ಒಳಗಿನ ಜೆಲ್ಲಿ ಚರಂಡಿಯನ್ನು ಸುಮಾರು 3.5 ಮೀ ಆಳದವರೆಗೆ ನಿರ್ಮಿಸುವ ಅವಶ್ಯಕತೆ ಕಂಡು ಬಂದಿರುತ್ತದೆ ಹಾಗೂ ಮೈದಾನದಲ್ಲಿ ಹೆಚ್ಚುವರಿಯಾಗಿ ಸಾರ್ವಜನಿಕ ಸಮಾರಂಭಗಳು ನಡೆಯಲಿದ್ದು, ಜನಸಂದಣಿಯ ಒತ್ತಡದಿಂದ ಚರಂಡಿಯ ಮೇಲ್ಪೈ ಮೇಲಿರುವ ಮಣ್ಣು ಕುಸಿಯಬಹುದಾಗಿರುತ್ತದೆ. ಮೂಲ ಅಂದಾಜು ಪಟ್ಟಿಯಲ್ಲಿ ಒದಗಿಸಿರುವ Filter Media ಅಂಶವು ಹೆಚ್ಚಾಗಿ ಈಜುಕೊಳದಲ್ಲಿ ಉಪಯೋಗಿಸುತ್ತಿದ್ದು, ಈ ಅಂಶವು ಹಾಲಿ ಮೈದಾನದ ಅಭಿವೃದ್ಧಿ ಯೋಜನೆಯಲ್ಲಿ ಅವಶ್ಯಕತೆ ಕಂಡು ಬರುವುದಿಲ್ಲ.

ಮೇಲಿನ ವಿವರಗಳ ಹಿನ್ನೆಯಲ್ಲಿ ಮೈದಾನದ ಮೇಲ್ಮೈ ಮೇಲಿಂದ ಬರುವ ಮಳೆ ನೀರನ್ನು ಹೊರ ಸಾಗಿಸಲು ಆರ್ ಸಿಸಿ ಲೀಡ್ ಡ್ರೈನ್ ಮಾಡುವ ಅವಶ್ಯಕತೆ ಇರುತ್ತದೆ. ಗ್ಯಾಲರಿ ಮೆಟ್ಟಿಲುಗಳ ಕೆಳಭಾಗದಲ್ಲಿನ ಪ್ರದೇಶವು ಅನವಶ್ಯಕ ಚಟುವಟಿಕೆಗಳಿಂದ ದೂರವಿಡಲು ಗ್ಯಾಲರಿ ಮೇಲೆ ನಿರ್ಮಿಸಬೇಕಾಗಿದ್ದ ಕೊಠಡಿಗಳನ್ನು, ಗ್ಯಾಲರಿ ಕೆಳಗಿನ ಪ್ರದೇಶದಲ್ಲಿ ನಿರ್ಮಿಸುವುದು ಅವಶ್ಯಕವಾಗಿದ್ದು, ಇದು ಮೈದಾನದಲ್ಲಿ ತಳ ಅಂತಸ್ತಿನಲ್ಲಿರುತ್ತದೆ. ಆದರೆ ಈ ಅಂಶಗಳನ್ನು ನಿರ್ವಹಿಸಲು ಮೂಲ ಗುತ್ತಿಗೆ ಕರಾರಿನಲ್ಲಿ ಇಲ್ಲದ ಕಾರಣ ಇವು ಹೆಚ್ಚುವರಿಯಾಗಿರುತ್ತದೆ. (EIRL)

ಆಟದ ಮೈದಾನದ ಮೇಲ್ಮೈ ಅನ್ನು ನಿರ್ಮಿಸುವ ಅಂಶಗಳಲ್ಲಿ ಮೂಲ ಅಂದಾಜು ಪಟ್ಟಿಯಲ್ಲಿ ಅಳವಡಿಕೆಯಾಗಿರುವ ಕೆಲವು ಅಂಶಗಳ ಪರಿಮಾಣಗಳಲ್ಲಿ ಹೆಚ್ಚುವರಿಯಾಗಿದ್ದು, ಈ ಹೆಚ್ಚುವರಿ ಪರಿಮಾಣಗಳಿಗೆ ಬೇಕಾಗಿರುವ ವೆಚ್ಚವನ್ನು ಲೆಕ್ಕ ಮಾಡಿ ವರ್ಕ್ ಸ್ಲಿಪ್ ಅನ್ನು ಕಾರ್ಯಪಾಲಕ ಅಭಿಯಂತರರು ಸಲ್ಲಿಸಿರುತ್ತಾರೆ. (Workslip)

ಈ ಮೇಲೆ ತಿಳಸಿದ ವಿವರಣೆಯಂತೆ ಮೂಲ ಅಂದಾಜು ಪಟ್ಟಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಅವಶ್ಯವಿರುವ ಇ.ಐ.ಆರ್.ಎಲ್ ಮತ್ತು ವರ್ಕ್‌ಸ್ಲಿಪ್ ಅಂಶಗಳನ್ನು ಅಳವಡಿಸಿಕೊಂಡು ಮಾರ್ಪಡಿತ ಅಂದಾಜು ಪಟ್ಟಿ ಸಲ್ಲಿಸಿದ್ದು, ಅದರ ಮೊತ್ತ ರೂ.3,59,78,432.00 ಗಳಿಗೆ (ಟಿ.ಪಿ.ಸೇರಿ) ಅನುಮೋದನೆಗಾಗಿ ಮುಖ್ಯ ಅಭಿಯಂತರರು (ಯೋಜನೆ) ರವರು ಸಲ್ಲಿಸಿದ್ದು, ದಿನಾಂಕ:06/06/2008 ರಂದು ನಡೆದ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಈ ಕಾಮಗಾರಿಗೆ ಸಂಬಂಧಿಸಿದ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್‌ಗಳನ್ನು ಅನುಮೋದಿಸುವ ಪ್ರಸ್ತಾವನೆಯನ್ನು ಚರ್ಚಿಸಲಾಗಿ ಸದರಿ ಪ್ರಸ್ತಾವನೆಯ ಅನುಮೋದನೆಯನ್ನು ಲೋಕೋಪಯೋಗಿ ಇಲಾಖೆಯ ಕೋಡಲ್ ನಿಯಮಗಳಂತೆ ನಿರ್ವಹಿಸಲು ಸೂಚಿಸಿರುತ್ತದೆ. ಈ ಪ್ರಸ್ತಾವನೆಗೆ ತಾಂತ್ರಿಕ ಸಲಹಾ ಸಮಿತಿಯವರು ನೀಡಿರುವ ಸೂಚನೆಯಂತೆ ಪಿಡಬ್ಲ್ಯೂಡಿ ಕೋಡಲ್ ನಿಯಮಗಳಂತೆ ಪಿಡಬ್ಲ್ಯೂಜಿ-65 ರಂತೆ ಕ್ಲಾಸ್ 13 (ಎ) ಯಿಂದ (ಸಿ) ತನಕ ಗುತ್ತಿಗೆದಾರರ ಕರಾರಿನಲ್ಲಿ ಸೇರಿಸಿರುವಂತೆ ಕ್ರಮ ತೆಗೆದುಕೊಂಡು ಕಾರ್ಯಪಾಲಕ ಅಭಿಯಂತರರವರು ವರ್ಕ್ ಸ್ಲಿಪ್ ಮತ್ತು ಇ.ಐ.ಆರ್.ಎಲ್ ಐಟಂಗಳ ಮೊತ್ತವನ್ನು ಲೆಕ್ಕ ಮಾಡಿ ಅನುಮೋದನೆಗೆ ಪ್ರಧಾನ ಅಭಿಯಂತರರವರ ಮುಖೇನ ಮಂಡಿಸಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

. . . . 2

ಹಿನ್ನೆಲೆಯಲ್ಲಿ ಸದರಿ ಮಾರ್ಪಡಿತ ಅಂದಾಜು ಪಟ್ಟಿಯಲ್ಲಿ ಅಡಕಗೊಳಿಸಿರುವ EIRL & Workslip ಗಳಿಗೆ ಮತ್ತು ಮಾರ್ಪಡಿತ ಅಂದಾಜು ಪಟ್ಟಿಯ ಮೊತ್ತವಾದ ರೂ.3,59,78,432.00 ಗಳಿಗೆ (ಟಿ.ಪಿ.ಸೇರಿ) ವ ಆರ್ಥಿಕದತ್ತವಾದ ಅಧಿಕಾರ ಮಾನ್ಯ ಆಡಳಿತಗಾರರ ರವರ ವ್ಯಾಪ್ತಿಯಲ್ಲಿರುತ್ತದೆ. ಅದರಂತೆ, ಈ ಕೆಳಕಂಡ ಮೋದನೆ ಕೋರಿದೆ.

1. ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರು ಸಲ್ಲಿಸಿರುವ ಹೆಚ್ಚುವರಿ ಅಂಶಗಳ ಪಟ್ಟಿಯ ಮೊತ್ತ ರೂ.61,47,783.10 ಕ್ಕೆ ಅನುಮೋದನೆ.
2. ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರು ಸಲ್ಲಿಸಿರುವ ವರ್ಕ್ ಸ್ಲಿಪ್ ಮೊತ್ತ ರೂ.49,60,955.46 ಕ್ಕೆ ಅನುಮೋದನೆ
3. ಮಂಜೂರಾದ ಮೂಲ ಅಂದಾಜಿನ ವ್ಯಾಪ್ತಿಯಲ್ಲಿರುವ ರೂ.3,59,78,432.00 (ಟಿ.ಪಿ.ಸೇರಿ) ಮೊತ್ತದ ಮಾರ್ಪಾಡು ಅಂದಾಜು ಪಟ್ಟಿಗೆ ಅನುಮೋದನೆ

ಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ 2008 ರ ಟಿಪ್ಪಣಿ.

ಯುಕ್ತರವರ ದಿನಾಂಕ:16/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:423/2008-09**

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ಅಷ್ಟಲಕ್ಷ್ಮಿ ಬಡಾವಣೆಯ 1ನೇ ಮುಖ್ಯ ರಸ್ತೆಯಿಂದ 24ನೇ ಮುಖ್ಯ ರಸ್ತೆಯವರೆಗೆ (ಸರಪಳಿ 450-525) ಮಳೆ ನೀರುಗಾಲುವೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೊಮ್ಮನಹಳ್ಳಿ ವಲಯದ ವ್ಯಾಪ್ತಿಯಲ್ಲಿ ಬರುವ ಅಷ್ಟಲಕ್ಷ್ಮಿ ಬಡಾವಣೆಯ 1ನೇ ಮುಖ್ಯ ರಸ್ತೆಯಿಂದ 24ನೇ ಮುಖ್ಯ ರಸ್ತೆಯವರೆಗೆ ಮಳೆ ನೀರುಗಾಲುವೆ ಅಭಿವೃದ್ಧಿ ಕಾಮಗಾರಿಯು ರೂ.490.00 ಲಕ್ಷಗಳಿಗೆ ಸರ್ಕಾರದ ಸಂಖ್ಯೆ: ನಅಇ/625/ಎಂಎನ್‌ವೈ/2007/07-08, ದಿನಾಂಕ:17/10/2008ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜನ್ನು ಲೋಕೋಪಯೋಗಿ ಇಲಾಖೆಯ, ಬೆಂಗಳೂರು ವೃತ್ತದ 2007-08ರ ದರಪಟ್ಟಿಯಂತೆ ರೂ.290.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ನೀಡಿದ್ದು ಮುಖ್ಯ ಅಭಿಯಂತರರು(ಬೃನೀಗಾಲುವೆ) ರವರು ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿದ ಶ್ರೀ.ಎನ್.ಎಂ.ಕೃಷ್ಣಮೂರ್ತಿ ಗುತ್ತಿಗೆದಾರರಿಗೆ ಕಾಮಗಾರಿಯ ಜರೂರತೆಯನ್ನು ಮನಗಂಡು ಕಾಮಗಾರಿಯನ್ನು ಪ್ರಾರಂಭಿಸಲು 04-04-2008ರಂದು ಲೇಟರ್ ಅಫ್ ಇಂಡೆಂಟ್ ನೀಡಿ ಸೂಚಿಸಲಾಗಿತ್ತು. ಆದರೆ, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದ ಕಾರಣ ಗುತ್ತಿಗೆದಾರರಿಗೆ ನೊಂದಾಯಿತ ಅಂಚೆ ಮೂಲಕ ದಿನಾಂಕ:26/05/2008 ರಂದು ತಿಳುವಳಿಕೆ ಪತ್ರ ಮತ್ತು ಅಂತಿಮ ತಿಳುವಳಿಕೆ ಪತ್ರವನ್ನು ದಿನಾಂಕ:07/06/2008ರಂದು ನೀಡಿ ಕಾಮಗಾರಿಯನ್ನು 3 ದಿವಸದೊಳಗೆ ಪ್ರಾರಂಭಿಸಲು ಸೂಚಿಸಲಾಗಿತ್ತು ಆದರೆ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದ ಕಾರಣ ಸದರಿ ಟೆಂಡರ್ ಅನ್ನು ರದ್ದುಪಡಿಸಿ ಮತ್ತು ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ಪತ್ರವನ್ನು ಬರೆದು ದಿನಾಂಕ:12/06/2008ರಂದು ಗುತ್ತಿಗೆದಾರರಿಗೆ ನೊಂದಾಯಿತ ಅಂಚೆ ಪತ್ರದ ಮೂಲಕ ತಿಳಿಯಪಡಿಸಿರುತ್ತದೆ.

ಅಷ್ಟಲಕ್ಷ್ಮಿ ಬಡಾವಣೆಯಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಕ್ಲಿಷ್ಟಕರವಾಗಿರುವುದರಿಂದ, ಕಾಮಗಾರಿಯನ್ನು ಅತಿ ಜರೂರಾಗಿ ಮುಗಿಸಬೇಕಾಗಿರುವುದರಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ಟೆಂಡರ್ ಕರೆಯಲು ಸೂಚಿಸಲಾದ ಮೇರೆಗೆ ಕಾರ್ಯಪಾಲಕ ಅಭಿಯಂತರರು ದಿನಾಂಕ:24-06-2008ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ 3 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರುಗಳ ತಾಂತ್ರಿಕ ಬಿಡ್‌ಅನ್ನು ಪರಿಶೀಲಿಸಲಾಗಿ ಶ್ರೀ.ಎ.ಚನ್ನರೆಡ್ಡಿ, ಮತ್ತು ಶ್ರೀ.ಆರ್. ಪುರುಷೋತ್ತಮ್, ಗುತ್ತಿಗೆದಾರರುಗಳು ಅರ್ಹರಾಗಿದ್ದು ಇವರುಗಳ ಆರ್ಥಿಕ ಬಿಡ್‌ಗಳನ್ನು ತೆರೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿ ವಿವರಗಳು ಕೆಳಕಂಡಂತಿವೆ.

. . . . 2

| ಹೆಸರು | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | Updated SR-2007-08 ರಂತೆ ಅಂದಾಜು ಮೊತ್ತ ರೂ. | ಶೇಕಡ ವಾರು ಹೆಚ್ಚುವರಿ/ಕಡಿಮೆ |
|---|---|---|---|
| | 1,31,63,763-00 | 1,02,80,457-94 | 28.046% ಹೆಚ್ಚುವರಿ |
| ...ಷೋತ್ತಮ್. | 1,04,69,214-50 | 1,02,80,457-94 | 1.836% ಹೆಚ್ಚುವರಿ |

...ಗೆದಾರರುಗಳಲ್ಲಿ ಶ್ರೀ.ಆರ್.ಪುರುಷೋತ್ತಮ್ ರವರು ಕಡಿಮೆ ದರ ನಮೂದಿಸಿರುವ ... ಸದರಿ ಕಾಮಗಾರಿಯನ್ನು ಪ್ರವಾಹ ಪೀಡಿತ ಪ್ರದೇಶದಲ್ಲಿ ಮತ್ತು ಕೊಳಚೆ ನೀರು ...ಂಡಿಯಲ್ಲಿ ನಿರ್ವಹಿಸಬೇಕಾಗಿದ್ದು, ಇದಕ್ಕೆ ಕೆಲಸಗಾರರಿಗೆ ಹೆಚ್ಚಿನ ಭತ್ಯೆಯನ್ನು ಸಹ ... ಗಮನಿಸಬಹುದಾಗಿರುತ್ತದೆ.

...ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಅನುಮೋದನೆ ಕೋರಿದೆ.

...ರುಷೋತ್ತಮ್,ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ. ...4.50 ಗಳನ್ನು Updated SR 2007-08 ರ ಅಂದಾಜು ಮೊತ್ತ ರೂ. ...7-94 ಗೆ ಹೊಲಿಸಿದಾಗ, ರವರ Updated CSR 2007-08ರ ...ಮೇಲೆ ಶೇಕಡಾ 1.836 ರಷ್ಟು ಹೆಚ್ಚುವರಿಯಾಗಿದ್ದು, ಸದರಿ ಕಾಮಗಾರಿಯ ...ಅನುಮೋದನೆ

...ಗಾರಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಾರಂಭಿಸಲು ಗುತ್ತಿಗೆದಾರರಿಗೆ ...ಫ್ ಇಂಡೆಂಟ್ ನೀಡಿರುವುದನ್ನು ಸ್ಥಿರೀಕರಿಸಲು ಕೋರಿ.

...ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ...ಕ:16/08/2008 ರ ಟಿಪ್ಪಣಿ.

...ವರ ದಿನಾಂಕ:16/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/08/2008 ರ ನಡವಳಿಗಳು

**ವಿಷಯದ ಸಂಖ್ಯೆ:425/2008-09**

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ಅಷ್ಟಲಕ್ಷ್ಮಿ ಬಡಾವಣೆಯ 1ನೇ ಮುಖ್ಯ ರಸ್ತೆಯಿಂದ 24ನೇ ಮುಖ್ಯ ರಸ್ತೆಯವರೆಗೆ (ಸರಪಳಿ 300-375)ಮಳೆ ನೀರುಗಾಲುವೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೊಮ್ಮನಹಳ್ಳಿ ವಲಯದ ವ್ಯಾಪ್ತಿಯಲ್ಲಿ ಬರುವ ಅಷ್ಟಲಕ್ಷ್ಮಿ ಬಡಾವಣೆಯ 1ನೇ ಮುಖ್ಯ ರಸ್ತೆಯಿಂದ 24ನೇ ಮುಖ್ಯ ರಸ್ತೆಯವರೆಗೆ ಮಳೆ ನೀರುಗಾಲುವೆ ಅಭಿವೃದ್ಧಿ ಕಾಮಗಾರಿಯ ರೂ.490.00 ಲಕ್ಷಗಳಿಗೆ ಸರ್ಕಾರವು ಸಂಖ್ಯೆ: ನಅಇ/625/ಎಂಎನ್‌ವೈ/2007/07-08, ದಿನಾಂಕ:17/10/2008ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತಾರೆ.

ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜನ್ನು ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ 2007-08ರ ದರಪಟ್ಟಿಯಂತೆ ರೂ.290.00ಲಕ್ಷಗಳಿಗೆ ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಮುಖ್ಯ ಅಭಿಯಂತರರು(ಬೃ.ನಿ.ಗಾಲುವೆ) ರವರು ನೀಡಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರವರು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿದ ಶ್ರೀ.ಎನ್.ಎಂ.ಕೃಷ್ಣಮೂರ್ತಿ, ಗುತ್ತಿಗೆದಾರರರಿಗೆ ಕಾಮಗಾರಿಯ ಜರೂರತೆಯನ್ನು ಮನಗಂಡು ಕಾಮಗಾರಿಯನ್ನು ಪ್ರಾರಂಭಿಸಲು 04-04-2008ರಂದು ಲೇಟರ್ ಅಫ್ ಇಂಡೆಂಟ್ ನೀಡಿ ಸೂಚಿಸಲಾಗಿತ್ತು. ಆದರೆ, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದ ಕಾರಣ ಗುತ್ತಿಗೆದಾರರಿಗೆ ನೊಂದಾಯಿತ ಅಂಚೆ ಮೂಲಕ ದಿನಾಂಕ:26/05/2008 ರಂದು ತಿಳುವಳಿಕೆ ಪತ್ರ ಮತ್ತು ಅಂತಿಮ ತಿಳುವಳಿಕೆ ಪತ್ರವನ್ನು ದಿನಾಂಕ:07/06/2008ರಂದು ನೀಡಿ ಕಾಮಗಾರಿಯನ್ನು 3 ದಿವಸದೊಳಗೆ ಪ್ರಾರಂಭಿಸಲು ಸೂಚಿಸಲಾಗಿತ್ತು ಆದರೆ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದ ಕಾರಣ ಸದರಿ ಟೆಂಡರ್ ಅನ್ನು ರದ್ದುಪಡಿಸಿರುವುದು ಮತ್ತು ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ಪತ್ರವನ್ನು ಬರೆದು ದಿನಾಂಕ:12/06/2008ರಂದು ಗುತ್ತಿಗೆದಾರರಿಗೆ ನೊಂದಾಯಿತ ಅಂಚೆ ಪತ್ರದ ಮೂಲಕ ತಿಳಿಯಪಡಿಸಿರುತ್ತದೆ.

ಅಷ್ಟಲಕ್ಷ್ಮಿ ಬಡಾವಣೆಯಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಕ್ಲಿಷ್ಟಕರವಾಗಿರುವುದರಿಂದ ಕಾಮಗಾರಿಯನ್ನು ಅತಿ ಜರೂರಾಗಿ ಮುಗಿಸಬೇಕಾಗಿರುವುದರಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ಟೆಂಡರ್ ಕರೆಯಲು ಸೂಚಿಸಲಾದ ಮೇರೆಗೆ ಕಾರ್ಯಪಾಲಕ ಅಭಿಯಂತರರು ದಿನಾಂಕ:24-06-2008ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಶ್ರೀ.ಪಿ.ಎಸ್.ರಾಜಣ್ಣ, ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ ಅನ್ನು ಪರಿಶೀಲಿಸಲಾಗಿ ಸದರಿಯವರು ಅರ್ಹರಾಗಿದ್ದು, ಇವರ ಅರ್ಥಿಕ ಬಿಡ್‌ಗಳನ್ನು ತೆರೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿ ವಿವರಗಳು ಕೆಳಕಂಡಂತಿವೆ;

. . . 2

| ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | Updated SR-2007-08 ರಂತೆ ಅಂದಾಜು ಮೊತ್ತ ರೂ. | ಶೇಕಡಾವಾರು ಹೆಚ್ಚುವರಿ |
|---|---|---|---|
| ಶ್ರೀ.ಪಿ.ಎಸ್.ರಾಜಣ್ಣ | 1,31,00,011.40 | 1,02,17,211.18 | 28.215% |

ದ ನಮೂದಿಸಿರುವ ಶ್ರೀ.ಪಿ.ಎಸ್.ರಾಜಣ್ಣ, ಗುತ್ತಿಗೆದಾರರನ್ನು ಅಂತಿಮವಾಗಿ ಸಂಧಾನಕ್ಕೆ ಗಿದ್ದು, ಗುತ್ತಿಗೆದಾರರು 2007-08ರ Updated ದರಪಟ್ಟಿ ಮೇಲೆ ಶೇ.24.00% ರಷ್ಟು ಹೆಚ್ಚುವರಿ ಮಗಾರಿಯನ್ನು ನಿರ್ವಹಿಸುವುದಾಗಿ ತಮ್ಮ ಸಂಧಾನಿತ ಪತ್ರ ನೀಡಿದ್ದು ವಿವರಗಳು ಕೆಳಕಂಡಂತಿವೆ.

ಗುತ್ತಿಗೆದಾರರು ನೀಡಿರುವ ರಿಬೇಟ್ ನಂತೆ ಪರಿಶೀಲಿಸಿದಾಗ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ...ದಾಜು ಮೊತ್ತ ರೂ. ...dated CSR-...07-08 | ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ ರೂ. | ಸಂಧಾನದ ನಂತರ ಗುತ್ತಿಗೆದಾರರ ನಮೂದಿಸಿರುವ ಮೊತ್ತ ರೂ. | Updated SR-2007-08 ರಂತೆ ಅಂದಾಜು ಮೊತ್ತದ ಮೇಲೆ ಶೇಕಡ ಹೆಚ್ಚುವರಿ |
|---|---|---|---|
| 1,02,17,211.18 | 1,31,00,011.40 | 1,26,69,341.86 | 24.00% ಹೆಚ್ಚುವರಿ |

ಕಾಮಗಾರಿಯನ್ನು ಪ್ರವಾಹ ಪೀಡಿತ ಪ್ರದೇಶದಲ್ಲಿ ಕೈಗೊಳ್ಳಬೇಕಾಗಿದ್ದು ಮತ್ತೊಮ್ಮೆ ಟೆಂಡರ್‌ಅನ್ನು ಸಮಯ ನಷ್ಟವಾಗುವುದರೊಂದಿಗೆ ಮುಂದಿನ ಮಳೆಗಾಲಕ್ಕೆ ಮುಂಚೆ ಕಾಮಗಾರಿಯನ್ನು ದುಸ್ಥರವಾಗುವುದು ಹಾಗೂ ಸದರಿ ಕಾಮಗಾರಿಯನ್ನು ಕೊಳಚೆ ನೀರು ಹರಿಯುತ್ತಿರುವ ನಿರ್ವಹಿಸಬೇಕಾಗಿದ್ದು ಇದಕ್ಕೆ ಕೆಲಸಗಾರರಿಗೆ ಹೆಚ್ಚಿನ ಭತ್ಯೆಯನ್ನು ಸಹ ನೀಡಬೇಕಾಗುವುದನ್ನು ದಾಗಿರುತ್ತದೆ.

ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಿದೆ.

ರಾಜಣ್ಣ, ಗುತ್ತಿಗೆದಾರರು ನಮೂದಿಸಿರುವ ಸಂಧಾನಿತ ಮೊತ್ತ ರೂ.1,26,69,341.86 dated SR 2007-08 ರ ಅಂದಾಜು ಮೊತ್ತ ರೂ.1,02,17,211.18 ಹೋಲಿಸಿದಾಗ, dated CSR 2007-08 ರ ದರಪಟ್ಟಿ ಮೇಲೆ ಶೇಕಡಾ 24.00 ರಷ್ಟು ಗಿದ್ದು, ಸದರಿ ಕಾಮಗಾರಿಯ ಟೆಂಡರಿಗೆ ಅನುಮೋದನೆ.

ನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಾರಂಭಿಸಲು ಗುತ್ತಿಗೆದಾರರಿಗೆ ಲೇಟರ್ ಅಫ್ ೀಡಿರುವುದನ್ನು ಸ್ಥಿರೀಕರಿಸಲು ಕೋರಿ.

ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ನಾಂಕ:16/08/2008 ರ ಟಿಪ್ಪಣಿ.

ಮುಕ್ತರವರ ದಿನಾಂಕ:16/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/08/2008ರ ನಡವಳಿಗಳು**

**ವಿಷಯದ ಸಂಖ್ಯೆ:429/2008-09**

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ಅಷ್ಟಲಕ್ಷ್ಮಿ ಬಡಾವಣೆಯ 1ನೇ ಮುಖ್ಯ ರಸ್ತೆಯಿಂದ 24ನೇ ಮುಖ್ಯ ರಸ್ತೆಯವರೆಗೆ (ಸರಪಳಿ–375–450) ಮಳೆ ನೀರುಗಾಲುವೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೊಮ್ಮನಹಳ್ಳಿ ವಲಯದ ವ್ಯಾಪ್ತಿಯಲ್ಲಿ ಬರುವ ಅಷ್ಟಲಕ್ಷ್ಮಿ ಬಡಾವಣೆಯ 1ನೇ ಮುಖ್ಯ ರಸ್ತೆಯಿಂದ 24ನೇ ಮುಖ್ಯ ರಸ್ತೆಯವರೆಗಿನ ಮಳೆ ನೀರುಗಾಲುವೆ ಅಭಿವೃದ್ಧಿ ಕಾಮಗಾರಿಯ ರೂ.490.00 ಲಕ್ಷಗಳಿಗೆ, ಸರ್ಕಾರದ ಸಂಖ್ಯೆ: [illegible]/2007/07–08, ದಿನಾಂಕ:17/10/2008ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ

ಸದರಿ ಕಾಮಗಾರಿಗೆ ಅಂದಾಜನ್ನು ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ 2007–08ರ ದರಪಟ್ಟಿಯಂತೆ ರೂ.290.00ಲಕ್ಷಗಳಿಗೆ ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಮುಖ್ಯ ಅಭಿಯಂತರರು(ಬೃ.ನಿ.ಗಾಲುವೆ) ರವರು ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು ಟೆಂಡರ್ ಹೊರಡಿಸಿದ್ದು, ಕಡಿಮೆ ದರ ನಮೂದಿಸಿದ ಶ್ರೀ.ಎನ್.ಎಂ.ಕೃಷ್ಣಮೂರ್ತಿ, ಗುತ್ತಿಗೆದಾರರಿಗೆ ಕಾಮಗಾರಿಯ ಜರೂರತೆಯನ್ನು ಮನಗಂಡು ಕಾಮಗಾರಿಯನ್ನು ಪ್ರಾರಂಭಿಸಲು 04–04–2008ರಂದು ಲೇಟರ್ ಆಫ್ ಇಂಡೆಂಟ್ ನೀಡಿ ಸೂಚಿಸಲಾಗಿತ್ತು. ಆದರೆ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದ ಕಾರಣ ಗುತ್ತಿಗೆದಾರರಿಗೆ ನೊಂದಾಯಿತ ಅಂಚೆ ಮೂಲಕ ದಿನಾಂಕ:26/05/2008 ರಂದು ತಿಳುವಳಿಕೆ ಪತ್ರ ಮತ್ತು ಅಂತಿಮ ತಿಳುವಳಿಕೆ ಪತ್ರವನ್ನು ದಿನಾಂಕ:07/06/2008 ರಂದು ನೀಡಿ ಕಾಮಗಾರಿಯನ್ನು 3 ದಿವಸದೊಳಗೆ ಪ್ರಾರಂಭಿಸಲು ಸೂಚಿಸಲಾಗಿತ್ತು. ಆದರೆ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದ ಕಾರಣ ಸದರಿ ಟೆಂಡರ್ ಅನ್ನು ರದ್ದುಪಡಿಸಿ ಮತ್ತು ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ಪತ್ರವನ್ನು ಬರೆದು ದಿನಾಂಕ:12/06/2008ರಂದು ಗುತ್ತಿಗೆದಾರರಿಗೆ ನೊಂದಾಯಿತ ಅಂಚೆ ಪತ್ರದ ಮೂಲಕ ತಿಳಿಯಪಡಿಸಿರುತ್ತದೆ.

ಅಷ್ಟಲಕ್ಷ್ಮಿ ಬಡಾವಣೆಯಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಕ್ಲಿಷ್ಟಕರವಾಗಿರುವುದರಿಂದ ಕಾಮಗಾರಿಯನ್ನು ಅತಿ ಜರೂರಾಗಿ ಮುಗಿಸಬೇಕಾಗಿರುವುದರಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ಟೆಂಡರ್ ಕರೆಯಲು ಸೂಚಿಸಿದ ಮೇರೆಗೆ ದಿನಾಂಕ:24/06/2008 ರಂದು ಕಾರ್ಯಪಾಲಕ ಅಭಿಯಂತರರು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ 6 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಶ್ರೀ.ಪಿ.ಎಸ್.ರಾಜಣ್ಣ ಮತ್ತು ಶ್ರೀ.ಬಿ.ಸುರೇಶ್ ಅರ್ಹರಾದ ಗುತ್ತಿಗೆದಾರರುಗಳಾಗಿದ್ದು, ಸದರಿಯವರುಗಳ ತಾಂತ್ರಿಕ ಬಿಡ್‌ಗಳನ್ನು ಪರಿಶೀಲಿಸಲಾಗಿ ಸದರಿಯವರುಗಳು ಅರ್ಹರಾದ ಹಿನ್ನೆಲೆಯಲ್ಲಿ, ಇವರು ಆರ್ಥಿಕ ಬಿಡ್‌ಗಳನ್ನು ತೆರೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿ ವಿವರಗಳು ಕೆಳಕಂಡಂತಿವೆ;

. . . . 2

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | Updated SR-2007-08 ರಂತೆ ಅಂದಾಜು ಮೊತ್ತ | ಶೇಕಡಾವಾರು ಹೆಚ್ಚುವರಿ/ಕಡಿಮೆ |
|---|---|---|---|---|
| 1 | ಶ್ರೀ.ಪಿ.ಎಸ್.ರಾಜಣ್ಣ | 1,31,03,711.40 | 1,02,20,068.54 | 28.215% ಹೆಚ್ಚುವರಿ |
| 2 | ಶ್ರೀ.ಬಿ.ಸುರೇಶ್ | 1,00,80,226.60 | 1,02,20,068.54 | 1.368% ಕಡಿಮೆ |

ಕನಿಷ್ಠ ದರ ನಮೂದಿಸಿರುವ ಶ್ರೀ.ಬಿ.ಸುರೇಶ ಅರ್ಹರಾದ ಗುತ್ತಿಗೆದಾರರಾಗಿದ್ದು,ಸದರಿ ಕಾಮಗಾರಿಯನ್ನು ಪ್ರವಾಹ ಪೀಡಿತ ಪ್ರದೇಶದಲ್ಲಿ ಮತ್ತು ಕೊಳಚೆ ನೀರು ಹರಿಯುತ್ತಿರುವ ಚರಂಡಿಯಲ್ಲಿ ನಿರ್ವಹಿಸಬೇಕಾಗಿದ್ದು ಇದಕ್ಕೆ ಕೆಲಸಗಾರರಿಗೆ ಹೆಚ್ಚಿನ ಭತ್ಯೆಯನ್ನು ಸಹ ನೀಡಬೇಕಾಗುವುದನ್ನು ಗಮನಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಿದೆ.

1. ಶ್ರೀ.ಬಿ.ಸುರೇಶ್ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ.1,00,80,226.60 ಗಳನ್ನು Updated SR 2007-08 ರ ಅಂದಾಜು ಮೊತ್ತ ರೂ.1,02,20,068.54 ಗಳಿಗೆ ಹೋಲಿಸಿದಾಗ Updated CSR 2007-08 ದರಪಟ್ಟಿಯ ಮೇಲೆ ಶೇಕಡಾ 1.368 ರಷ್ಟು ಕಡಿಮೆಯಾಗಿದ್ದು, ಸದರಿ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ.

2. ಸದರಿ ಕಾಮಗಾರಿಯನ್ನು ಸಾರ್ವಜನಿಕರ ಹಿತದೃಷ್ಠಿಯಿಂದ ಪ್ರಾರಂಭಿಸಲು ಗುತ್ತಿಗೆದಾರರಿಗೆ ಲೇಟರ್ ಅಫ್ ಇಂಡೆಂಟ್ ನೀಡಿರುವುದನ್ನು ಸ್ಥಿರೀಕರಿಸಲು.

ಮೇಲ್ಕಂಡ ಆಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16/08/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:16/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:23/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:315/2008-09**

ಮಹಾರಾಣಿ ಕಾಲೇಜಿನ ವೃತ್ತದಲ್ಲಿ ವಾಹನ ಸುರಂಗ ಮಾರ್ಗಕ್ಕೆ ಎದುರು ರಸ್ತೆ ನಿರ್ಮಿಸುವ ಕಾಮಗಾರಿಯ ಬಗ್ಗೆ.

**ಪ್ರಸ್ತಾವನೆ:**

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಮಹಾರಾಣಿ ಕಾಲೇಜಿನ ವೃತ್ತದಲ್ಲಿ ವಾಹನ ಸುರಂಗ ಮಾರ್ಗ ನಿರ್ಮಿಸಲು ಉದ್ದೇಶಿಸಿದ್ದು, ಸದರಿ ವಾಹನ ಸುರಂಗ ಮಾರ್ಗಕ್ಕೆ ಎದುರು ರಸ್ತೆ ನಿರ್ಮಿಸಲು ಕಾಮಗಾರಿ ಅಂದಾಜು ಪಟ್ಟಿ ತಯಾರಿಸಲಾಗಿದೆ. ಈ ಹಿಂದೆ ಸದರಿ ಎದುರು ರಸ್ತೆಗಳನ್ನು ಸಾಯಿಲ್ ನೈಲಿಂಗ್ ಮಾಡಿ ನಿರ್ಮಿಸಲು ಅನುಮೋದನೆ ಪಡೆಯಲಾಗಿತ್ತು. ಆದರೆ, ಟೆಂಡರ್ ಅವಧಿ ಮುಗಿದಿದ್ದು ಸದರಿ ಟೆಂಡರ್‌ಗಳನ್ನು ರದ್ದುಗೊಳಿಸಲಾಗಿದೆ. ಎದುರು ರಸ್ತೆಯನ್ನು ಇನ್ನು ಗಟ್ಟಿ ಮುಟ್ಟಾಗಿ ದೀರ್ಘ ಬಾಳಿಕೆ ಬರುವಂತೆ ನಿರ್ಮಿಸಲು ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ವಯ ರೂ.63.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:08/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು